


International Journal of Kannada Research
www.kannadajournal.com

**ISSN: 2454–5813**
IJKR 2017; 3(3): 81-83
© 2017 IJKR
www.kannadajournal.com
Received: 15-05-2017
Accepted: 16-06-2017

**ಮೈತ್ರಿ ಭಟ್**
ಸಂಶೋಧನ ವಿದ್ಯಾರ್ಥಿ, ಎಸ್. ವಿ. ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಕೊಣಾಜೆ

**Correspondence**
**ಮೈತ್ರಿ ಭಟ್**
ಸಂಶೋಧನ ವಿದ್ಯಾರ್ಥಿ, ಎಸ್. ವಿ. ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಕೊಣಾಜ

# ಪ್ರೊ. ಎಸ್ ವಿ ಪರಮೇಶ್ವರ ಭಟ್ಟರ ಕಾವ್ಯಗಳಲ್ಲಿ ಕಂಡು ಬರುವ ಜೀವನ ದರ್ಶನ

**ಮೈತ್ರಿ ಭಟ್**

ಮಲೆನಾಡಿನಲ್ಲಿ ಹುಟ್ಟಿ ನಿಸರ್ಗದ ನಡುವೆ ಬೆಳೆದ ಎಸ್‌ವಿಪಿ ಕನ್ನಡದ ಪ್ರಾಚೀನ ಕಾವ್ಯ, ಛಂದೋಪ್ರಭೇದಗಳನ್ನು ಹೊಸಗನ್ನಡ ಕಾವ್ಯರೂಪದಲ್ಲಿ ಪುನರುಜ್ಜೀವನ ಮಾಡಿದ ರೀತಿ ವಿಶಿಷ್ಟವಾದುದು. ಇಂದ್ರಚಾಪ, ಚಂದ್ರವೀಧಿಯಂತಹ ಸಾಂಗತ್ಯ ಕೃತಿಗಳು, ಉಪ್ಪು ಕಡಲು, ಪಾಮರದಂತಹ ವಚನ ಸಂಕಲನಗಳು, ಸುರಗಿ ಸುರಹೊನ್ನೆಯಂತಹ ತ್ರಿಪದಿ ಮುಕ್ತಕಗಳು, ಇಂದ್ರಗೋಪದಂತಹ ಏಳೆ ರಚನೆಗಳು ಅವರ ಕಾವ್ಯ ಪ್ರಯೋಗದ ಮೂಲಕ ಹೊಸ ಅರ್ಥವನ್ನು ಪಡೆದವು. ಅವರ ಮಾತು ಸಾಹಿತ್ಯ, ಬದುಕು ಸಂಸ್ಕೃತಿ. ಅವರ ಮಾತಿನ ರೀತಿ, ರೂಪಕಗಳ ಸರಮಾಲೆ, ಅನುಭವಗಳನ್ನು ಬಿಚ್ಚುತ್ತಿದ್ದ ವೈಖರಿ, ವಿಷಯ ಮಂಡನೆಯೊಂದಿಗೆ ಜೋಡಣೆಗೊಳ್ಳುತ್ತಿದ್ದ ನೂರಾರು ಅನುಭವದ ತುಣುಕುಗಳು ಒಂದು ಕನಸಿನ ಜಗತ್ತನ್ನು ಕಟ್ಟಿ ಕೊಡುತ್ತವೆ.

ಬದುಕಿನ ಬಗೆಗಿನ ಚಿಂತನೆ, ಅರ್ಥಪೂರ್ಣವಾದ ಬದುಕನ್ನು ಬದುಕುವಾಗ ಎದುರಾಗುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕಾದ ಬಗೆ, ಮನುಷ್ಯನ ದೌರ್ಬಲ್ಯಗಳು, ಅತಿಯಾಸೆ, ಅಸಹಕಾರ, ಜಡತ್ವ, ಪರಾವಲಂಬನೆ, ಸೋಗಲಾಡಿತನ, ಚಪಲತೆಗಳನ್ನು ಮೀರಿ ನಿಂತಾಗ ಬದುಕು ಸಫಲವಾಗುವ ರೀತಿ ಮೊದಲಾದ ಉಪದೇಶಾತ್ಮಕ ಹಾಗೂ ಜೀವನಾನುಭವದಿಂದ ಕೂಡಿದ ಸಾಂಗತ್ಯಗಳನ್ನು ‘ಇಂದ್ರಚಾಪ’ ಕೃತಿಯಲ್ಲಿ ನೋಡಬಹುದು. ಸ್ವರೂಪ ಹಾಗೂ ಅಭಿವ್ಯಕ್ತಿ ಕ್ರಮದಲ್ಲಿ ಸಾಂಗತ್ಯ ಮುಕ್ತಕಗಳಾಗಿರುವ ‘ಇಂದ್ರಚಾಪ’ದ ಕವಿ ಸಾಲುಗಳು ಸಹೃದಯನೊಂದಿಗೆ ಸರಸ ಸಲ್ಲಾಪದಂತೆ ಸಂಭಾಷಿಸುತ್ತವೆ. ಸ್ವವಿಚಾರದಿಂದ ಕೂಡಿದ ಇವು ಸುಭಾಷಿತದ ರೂಪವನ್ನು ಹೊಂದಿ ನಮ್ಮ ಅರಿವಿನ ಪರಿಧಿಯನ್ನು ವಿಸ್ತರಿಸುತ್ತವೆ. ನಾವು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾದ ಸದ್ಗುಣಗಳ ಬಗೆಗೆ ಅವರು ಹೇಳುವ ರೀತಿ ವಿನೂತನವಾಗಿದೆ. ಜೀವನದಲ್ಲಿ ಭರವಸೆ, ದಯೆ, ಆಶಾಭಾವ, ಸತತ ಪರಿಶ್ರಮ, ಒಳಿತು, ದಾನ, ಸಂಸಾರದ ಕುರಿತು ಅವರು ಹೇಳುವ ವಿವರಗಳು ವಚನಕಾರರ ವಚನಗಳಲ್ಲಿ, ಸರ್ವಜ್ಞನ ತ್ರಿಪದಿಗಳಲ್ಲಿ, ಡಿವಿಜಿ ಅವರ ಮಂಕುತಿಮ್ಮನ ಕಗ್ಗದಲ್ಲಿ ಕಂಡು ಬರುವಂತಹ ಜೀವನ ದರ್ಶನವನ್ನು ನೀಡುತ್ತವೆ. "ಕೊಲಬೇಡ ಜೀವಿಯ ನೋಯಿಸಬೇಡವ್ಲೋ ದಯವಿರಬೇಕಿಹ ಪರಕೆ" ಎಂಬ ಸಾಲುಗಳು ಬಸವಣ್ಣನವರ "ದಯವೇ ಧರ್ಮದ ಮೂಲ" ಎಂಬ ಮಾತನ್ನು ನೆನಪಿಸುತ್ತವೆ.

ಇವರ ಮುಕ್ತಕಗಳು ಬದುಕನ್ನು ಕೇಂದ್ರೀಕರಿಸಿ ಮಾನವನ ಉದ್ಧಾರವನ್ನು ಆಶಿಸುತ್ತವೆ. ಬದುಕಿನ ಅರ್ಥ, ಜೀವನ ದರ್ಶನಗಳ ಜೊತೆ ಆತ್ಮವಿಮರ್ಶೆಯನ್ನೊಡಗೂಡಿದ ವೈಚಾರಿಕತೆಯಿಂದ ಕೂಡಿವೆ. ಕವಿ ಹೇಳಬೇಕೆನಿಸಿದ ಅನುಭವಗಳ ಸರಳ ಹಾಗೂ ಹೃದಯಸ್ಪರ್ಶಿ ಅಭಿವ್ಯಕ್ತಿಯೇ ಇಲ್ಲಿದೆ. ಜೀವನದಲ್ಲಿರಬೇಕಾದ ಭರವಸೆ, ಪರೋಪಕಾರದ ಚಿಂತನೆಗಳ ಕುರಿತ ಅವರ ಅಂತರಂಗದ ಯೋಚನೆಗಳಿವೆ. ಜೀವನವೆಂಬುದು ಬರಿ ಸುಳ್ಳು–ಜೊಳ್ಳು ಅಲ್ಲ, ಅದೊಂದು ಹಲವು ಅನುಭವಗಳ ಸಂಗಮ. ಮಾನವ ಸದಾ ಕ್ರಿಯಾಶೀಲನಾಗಿದ್ದು ಸನ್ಮಾರ್ಗದಲ್ಲಿ ನಡೆಯಬೇಕು, ಬದುಕನ್ನು ಹೇಗೆ ಸುಂದರಗೊಳಿಸಬೇಕು ಎಂಬುದನ್ನು ಎಸ್ ವಿ ಪಿ ಅವರು ಸರಳ, ಸುಂದರ ಹಾಗೂ ಭಾವಸ್ಪರ್ಶಿಯಾಗಿ ಇಲ್ಲಿ ನಿರೂಪಿಸಿದ್ದಾರೆ. ಉದಾಹರಣೆಗೆ:

"ಬಂಗಾರದಂತಹ ನಾ ಕೊಟ್ಟ ದಿನವನು
ನೀ ಮಣ್ಣು ಮಾಡಿದೆಯೆಂದು
ಕೆಂಪನೆ ಮುಖ ಮಾಡಿ ನಿನ್ನನೆ ನೋಳ್ಪನು
ದಿನಪನು ತಾ ಪೋಗುವಂದು"
"ಹತ್ತೆಡೆಯೊಳು ತೋಡಿ ಒಂದಡಿಯಷ್ಟನು
ಬರಲಿಲ್ಲ ನೀರೆನ್ನಬೇಡ
ಒಂದೆಡೆಯೊಳು ತೋಡು ಹತ್ತಡಿಯಷ್ಟನು
ಚಿಮ್ಮುವುದುದಕವು ನೋಡ" ಇತ್ಯಾದಿ.

‘ಇಂದ್ರಚಾಪ’ದಲ್ಲಿ ಅವರ ಬದುಕಿನ ವೈಯಕ್ತಿಕ ಕಷ್ಟಕಾರ್ಪಣ್ಯಗಳ ವಿಷಾದಪೂರ್ಣ ಚಿತ್ರಣವಿದೆ. ಅವರು ಯಾವ ಸದ್ದುಗದ್ದಲವಿಲ್ಲದೆ, ಅಬ್ಬರ ಆಡಂಬರಗಳಿಲ್ಲದೆ ಕಹಿಯನ್ನು ನುಂಗಿ ಸಿಹಿಯನ್ನು ಮಾತ್ರ ನೀಡಿದರು.

‘ಉಪ್ಪು ಕಡಲು’ ಅವರ ಬದುಕಿನ ರೂಪಕ. ಇದರಲ್ಲಿ ತಾವು ಕಂಡ ಉಂಡ ಉಪ್ಪನ್ನು, ಉಪ್ಪಿನ ಋಣದ ಕಲ್ಪನೆಯನ್ನು ಬಗೆಬಗೆಯಾಗಿ ಹೇಳಿಕೊಂಡಿದ್ದಾರೆ. ಕಡಲು ಮತ್ತು ಒಡಲಿನ ಬಗ್ಗೆ ಅವರು ಬರೆದ ಈ ವಚನ ಒಡಲನ್ನು ನೀಗಿಕೊಂಡು ಬಹಳ ಕಾಲದ ಬಳಿಕ ಈಗಲೂ ಅವರ ವ್ಯಕ್ತಿತ್ವವನ್ನು ಕಟ್ಟಿ ಕೊಡುವ, ಮನಕ್ಕೆ ಮುಟ್ಟಿಸುವ ಮುತ್ತಿನಂತಹ ಮಾತು. ಅದು ಹೀಗಿದೆ:

"ನಿನ್ನ ಆ ಕಡಲು ಉಪ್ಪಾದರೂ ಅದರೊಳಗೆ
ನಿನ್ನದೆಂಬ ಮುತ್ತುಂಟು ರತ್ನವುಂಟು
ನನ್ನ ಈ ಒಡಲು ಮುಪ್ಪಾದರೂ
ಇದರೊಳಗೆ ನೀನೆಂಬ ಮುತ್ತುಂಟು ರತ್ನವುಂಟು
ಇದು ಕಾರಣ ಆ ಕಡಲೂ ಭವ್ಯ ಈ ಒಡಲೂ ಭವ್ಯ ಸದಾಶಿವಗುರು"

ಅವರ ಜೀವನಾನುಭವಗಳೇ ಇಲ್ಲಿ ವಚನದ ರೂಪು ಪಡೆದಿವೆ. ‘ಉಪ್ಪು ಕಡಲು’ ಅವರ ನುಡಿರತ್ನ. ಅವರ ಮನಸ್ಸು ಕಡಲ ತೆರೆಗಳಲ್ಲಿ ಲೀನವಾದಾಗ ಅದರ ಪ್ರಭಾವದಿಂದ ಉದಿಸಿದ ಉತ್ಕಟ ಭಾವದಿಂದ ತಾನೇ ಉದಿಸಿಬಂದಂತಿವೆ ಈ ವಚನಗಳು. ಜಗತ್ತೆಂಬ ಹೊತ್ತಿಗೆಯ ಹಗಲಿರುಳೆಂಬ ಹಾಳೆಗಳ ಪುಟ ತಿರುವಿದಂತೆಲ್ಲಾ ಹೊಸ ಯುಗ ಪ್ರಾರಂಭವಾಗುವ ತೆರದಲ್ಲಿ ಅವರ ವಚನಗಳು ಸಮಕಾಲೀನತೆಗೆ ಹತ್ತಿರವಾಗಿ ಕವಿಭಾವದ ಜೊತೆ ಓದುಗನ ಭಾವವೂ ಮಿಳಿತವಾಗುವಂತೆ ಆತ್ಮ ವಿಮರ್ಶೆಯ ಜೊತೆಜೊತೆಗೆ ಜೀವನದ ವಿಮರ್ಶೆಯನ್ನೂ ಮಾಡುತ್ತವೆ.

‘ಉಪ್ಪು ಕಡಲು’ ಅವರ ಆತ್ಮಾವಲೋಕನ, ಜಿಜ್ಞಾಸೆಗಳಿಗೆ ಗ್ರಾಸವನ್ನೊದಗಿಸಿತು. ಅವರಿಗೆ ಕಡಲಿನ ಅಗಾಧತೆಯ ಮುಂದೆ ಮನುಷ್ಯ ಹಾಗೂ ಮನುಷ್ಯತನದ ಇತಿಮಿತಿಗಳು ಗೋಚರವಾದವು. ಅಲ್ಲದೆ, ಇಲ್ಲಿ ಬದುಕಿನ ಅಸೂಯೆ, ಹೋರಾಟ, ಆಕಾಂಕ್ಷೆ, ಹಂಬಲ, ತುಡಿತಗಳನ್ನು ತೆರೆದಿಟ್ಟ ಪರಿ ಅನನ್ಯವಾದುದು.

‘ಚಂದ್ರವೀಧಿ’ ಸ್ವತಂತ್ರ ಶೃಂಗಾರ ಮುಕ್ತಕಗಳ ಸಂಗ್ರಹ. ತರುಣ ವಯಸ್ಸಿನ ದಂಪತಿಗಳ ಸಂಸಾರದ ಸರಸ ವಿರಸಗಳು, ಪ್ರಣಯಿಗಳ ಆಮೋದಗಳು, ಲಜ್ಜೆ–ಭೀತಿಗಳು, ಮುನಿಸು, ಕನಸುಗಳು, ವಿರಹ ವಿಲಾಪಗಳು ಚಿತ್ರಿತವಾಗಿವೆ. ಒಮ್ಮೆ ಹಾಸ್ಯದ ಸೆಳೆಮಿಂಚು ರೇಖೆಗಳು ಹರಿದು, ಕೆಲವೊಮ್ಮೆ ವಿಷಾದದ ನೆರಳು ಕವಿದು, ವಾಸ್ತವ ಬದುಕಿನ ವಿಪರ್ಯಾಸಗಳನ್ನು ಗುರುತಿಸುತ್ತವೆ. ಅಂಥ ಕೆಲವು ತುಣುಕುಗಳನ್ನು ನಾವಿಲ್ಲಿ ನೋಡಬಹುದು:

"ಬಳೆಯಿಲ್ಲ ಕೈಯೊಳು, ಹೂವಿಲ್ಲ ಮುಡಿಯೊಳು
ಕುಂಕುಮವಿಲ್ಲ ಹಣೆಯೊಳು, ಚೆಲುವಿಲ್ಲ ತನುವೊಳು
ಗೆಲುವಿಲ್ಲ ಮನದೊಳು
ನಮ್ಮ ಹೆಣ್ಣಿವಳು"
"ಏನು ಕಾರಣವಾಗಿ ಕಾರುಗಳೆರಡೂವೆ ಡಿಕ್ಕಿಯಾದವು ಇಲ್ಲಿ ಹೀಗೆ?
ಚಾಲಕರಿಬ್ಬರ ನಾಲ್ಕು ಕಣ್ಣುಗಳೂವೆ ಹಾಯ್ದುವು ಒಬ್ಬಳ ಮೇಲೆ"
"ಕಾಫಿಗೆ ಸಕ್ಕರೆ ಹೆಚ್ಚಾಯಿತೆಂದೆನು
ಅಷ್ಟಕ್ಕೆ ಇಷ್ಟೇಕೆ ಸಿಟ್ಟು
ನಾಲಗೆ ಸಿಹಿಯಾಯಿತಾದರೂ ಮನವನು
ಕಹಿ ಮಾಡಿಬಿಟ್ಟೆ"

ಸಹಜ ಕವಿತ್ವ, ಪದ ಚಮತ್ಕಾರ, ಹೊಸ ನುಡಿಗಟ್ಟಿನಲ್ಲಿಟ್ಟ ಲೋಕೋಕ್ತಿ, ಜಾಣ್ನುಡಿ, ಅರ್ಥಗರ್ಭಿತ ಹೇಳಿಕೆಗಳಿಂದ ಗಮನ ಸೆಳೆಯುವ ಅವರ ಕಾವ್ಯದ ಕೆಲ ಉದಾಹರಣೆಗಳನ್ನು ನೋಡಬೇಕೆಂದರೆ:

"ಸರಳತೆ ಸಾಲದು ಕಾವ್ಯದ ಸಿದ್ದಿಗೆ
ವಕ್ರತೆ ಸಹ ಬೇಕು ನಮಗೆ
ಮಾಡಿದೆವಾದರೆ ಬೆರಳನು ನೆಟ್ಟಗೆ ಹಿಡಿಯುವುದೇನನು? ಹೇಗೆ?"

ಇದು ಕಾವ್ಯಮೀಮಾಂಸೆಯಲ್ಲಿ ವಕ್ರೋಕ್ತಿಯ ಬಗೆಗಿನ ಅವರ ನಿಲುವು.

"ಹರಿಕತೆ ಮುಗಿವಾಗ ತಟ್ಟೆಯ ಹುಡುಗನು
ಹತ್ತಿರ ಬಂದುದ ಕಂಡು
ಜಿಪುಣರು ಮೂವರೊಳಬ್ಬನು ಬಿದ್ದನು
ನಡೆದರಿಬ್ಬರು ಹೊತ್ತುಕೊಂಡು"

‘ಇಂದ್ರಗೋಪ’ದಲ್ಲಿ ಬರುವ ‘ಗಾಳಿಯ ಹಾಡು’ ಎಂಬ ಕವನದ ಕೊನೆಯ ಸಾಲುಗಳಲ್ಲಿ ಹೇಗೆ ಗಾಳಿ ಯಾರ ಪ್ರಶಂಸೆಯನ್ನೂ ಹೊಗಳಿಕೆಯನ್ನೂ ಬಯಸದೆ ತನ್ನ ಪಾಡಿಗೆ ತಾನು ಬೀಸುವುದೋ ಹಾಗೆಯೇ ಮಾನವನೂ ಯಾವುದೇ ತೆರನಾದ ಕೀರ್ತಿ ಆಮಿಷಗಳನ್ನು ಬಯಸದೆ ತನ್ನ ಕಾರ್ಯವನ್ನು ಮಾಡುತ್ತಾ ಸಾಗಬೇಕು ಎಂದು ಹೇಳಿದ್ದಾರೆ. ಇದರಲ್ಲಿನ ಇನ್ನೊಂದು ಕವನ ‘ಹೋರಾಟದ ಹಾಡು’ ಹೋರಾಟವಿಲ್ಲದ ಮಾನವ ಬಾಳು ವ್ಯರ್ಥ. ಆದುದರಿಂದ ಮಾನವ ಸದಾ ಜೀವನದಲ್ಲಿ ಹೋರಾಟವನ್ನು ನಡೆಸಬೇಕು ಎಂದು ಸಾರುತ್ತದೆ.

"ಎಚ್ಚರವೆ ಹೊಸ ಹುಟ್ಟು, ನಿದ್ದೆ ಸಾವು
ಕಲಿತನವೆ ಹೊಸ ಹುಟ್ಟು, ಅಳುಕು ಸಾವು"

– ಎಂಬ ಸಾಲುಗಳು ಬದುಕಿನಲ್ಲಿ ಹುಟ್ಟು ಸಾವಿನ ವ್ಯಾಖ್ಯಾನವನ್ನು ಕೊಡುತ್ತದೆ. ಪುರಂದರದಾಸರ ಕೀರ್ತನೆಯನ್ನು ನೆನಪಿಸುವ ‘ನಗೆ ಬರುತಲಿಹುದೆನಗೆ’ ಲೋಕದಲ್ಲಿ ಹೇಗೆ ಸಾಮರಸ್ಯದ ಜೀವನವನ್ನು ನಡೆಸಬೇಕು ಹಾಗೂ ಏನನ್ನೇ ಮಾಡಿದರೂ ಏನಾದರೊಂದು ಕಟಕಿಯಾಡುವ ಇತರರೊಂದಿಗೆ ಹೇಗೆ ಹೊಂದಿಕೊಂಡು ಬಾಳಬೇಕು ಎಂಬುದನ್ನು ನಮಗೆ ತಿಳಿಸುತ್ತದೆ. ಅಲ್ಲದೆ, ಇಂದಿನ ಸಾಂಸಾರಿಕ ಜಗತ್ತಿನ ನೈಜ ಚಿತ್ರಣದ ಜೊತೆ, ಉರುಳುವ ಕಾಲದ ಜೊತೆ ನೋವನ್ನು ಮರೆತು ನಗುತ ಬಾಳುವೆ ಮಾಡುವುದರ ಬಗ್ಗೆ ತಿಳಿಸಿದ್ದಾರೆ.

ತುಂಬೆ ಹೂವು ಸದಾಶಿವನ ಪ್ರಿಯ ಪುಷ್ಪವಾದಂತೆ, ಕ್ಷಣಿಕ ಜೀವನದಲ್ಲಿ ಮಾನವನೂ ಸಾರ್ಥಕವಾದ ಬಾಳನ್ನು ಬಾಳಬೇಕೆಂಬುದನ್ನು ‘ತುಂಬೆ ಹೂವು’ ಸಂಕಲನದ ಮೂಲಕ ಕವಿ ಹೇಳಿದ್ದಾರೆ. ಜೀವನ ವೈವಿಧ್ಯವನ್ನು ತಮ್ಮ ಅನುಭವ ವೈವಿಧ್ಯದ ಜೊತೆ ಪೋಣಿಸಿ, ಸರಳ, ಸುಂದರ, ಸುಮಧುರವಾಗಿ ರೂಪಿಸಿದ್ದಾರೆ. ಒಂದೊಂದು ಏಳೆಯೂ ಪುಟ್ಟ ನೀತಿಯನ್ನೋ, ವಿಡಂಬನೆಯನ್ನೋ, ಹಾಸ್ಯವನ್ನೋ, ಸ್ವಾನುಭವದ ಮಾತನ್ನೋ ಹೇಳುತ್ತದೆ. ಕವಿಯು ತಾನು ಕಂಡ ಪ್ರಪಂಚದಲ್ಲಿನ ಸುಖದುಃಖ, ಸರಸ, ಹಾಸ್ಯ, ನೋವು, ಬಾಳಿನಲ್ಲಿನ ಶ್ರದ್ಧೆ, ಆಶಾವಾದ, ಹೊಸದೃಷ್ಟಿ, ಹಳತರೊಳು ಒಳಿತನಾಯ್ವುದು ಹೀಗೆ ನೂರಾರು ವಿಚಾರಗಳ ಪುಟ್ಟ ಪ್ರಪಂಚವನ್ನೇ ಇಲ್ಲಿ ಎಳೆಎಳೆಯಾಗಿ ತೆರೆದಿಟ್ಟಿದ್ದಾರೆ. ಕವಿ ಕೇವಲ ಕನಸು ಕಾಣುತ್ತ ಕಲ್ಪನೆಯಲ್ಲಿ ತೇಲಾಡದೆ, ಸಮಕಾಲೀನ ಪ್ರಜ್ಞೆಯ ಜೊತೆ ತಮ್ಮ ಆಳವಾದ ಅನುಭವವನ್ನು ಈ ಏಳೆಗಳಲ್ಲಿ ಜೋಡಿಸಿಟ್ಟ ಪರಿ ಅನನ್ಯ. ಕೆಲವು ಸಾಲುಗಳ ಮೂಲಕ ಅದನ್ನು ನಾವು ಸವಿಯಬಹುದು.

"ನೀಚರ ಸಂಗವು ಈಚಲ ರಸದಂತೆ"
"ಮನಸಿನ ತಾಳನು ಅನುಮಾನ ಕೊರೆವುದು
ಅನುದಿನ ಕುಟ್ಟೆಹುಳುವಾಗಿ"
"ಬಾಳಿನ ಗಿಡದ ಆ ನಾಳೆಯ ಹಣ್ಣಿಗೆ
ಪಾಳಿಯೊಳಿಂದು ಕೃಷಿಮಾಡು"
"ಅಂಕೆಯಿಲ್ಲದ ಕಪಿ ಲಂಕೆಯ ಸುಟ್ಟಿತು
ಅಂಕೆಯೊಳಿರ್ಪುದೆ ಒಳಿತು"
"ಹೊತ್ತಗೆ ಎನ್ನುವುದು ಹೊತ್ತಿನ ದೀಪವು
ಚಿತ್ತದ ತಮವ ಕಳೆವುದು"

ಅವರ 'ಸುರಗಿಯ ಸುರಹೊನ್ನೆ'ಯಲ್ಲಿ ಬದುಕೆಂದಿಗೂ ಹೆದ್ದಾರಿಯಲ್ಲ, ಅದು ಅಡೆತಡೆಗಳಿಂದ ಕೂಡಿದ ದಾರಿ. ಆದುದರಿಂದ ಕಹಿಯನ್ನು ಸಿಹಿಯನ್ನಾಗಿಸುವುದು ಹೇಗೆಂಬುದನ್ನು ನಗುವಿನ ಪ್ರಾಮುಖ್ಯತೆಯ ಮೂಲಕ ತಿಳಿಸಿದ್ದಾರೆ:

"ನಗಿಸುವ ಕಲೆಯಂತೆ ನಗುವುದು ಸಹ ಕಲೆ
ನಗಿಸುವ ನಗುವ ಕಲೆಯನು–ಮರೆತರೆ
ಮೃಗ ನಾವು ಕೇಳೆ ಸರಸಿಯೆ"

ಇಲ್ಲಿನ ತ್ರಿಪದಿಗಳಲ್ಲಿ ನೀತಿಯ ಜೊತೆಜೊತೆಗೆ ವ್ಯಂಗ್ಯ, ವಿಡಂಬನೆ, ಕರುಣೆ, ಮರುಕವೂ ಅಡಕವಾಗಿದೆ.

ಬದುಕೆಂಬುದು ಹಾಲ್ಗಡಲು ಅಥವಾ ಜೇನ್ಗಡಲು ಅಲ್ಲ, ಅದು ಉಪ್ಪು ಕಡಲು. ಇಲ್ಲಿ ಉಸಿರಾಡಿ, ಈಜಾಡಿ ಬದುಕಲು ಮತ್ಸ್ಯಕಲೆ ಬೇಕೆಂಬುದನ್ನು ಇಲ್ಲಿನ ವಚನಗಳು ಸಾರುತ್ತವೆ.

ಅವರ 'ಒಂದು ರಾತ್ರೆ' ಕವನದಲ್ಲಿನ "ಬರುವ ಮುಂದಿನ ದಿನದ ನವನವೋದಯಕಾಗಿ ಪ್ರಕೃತಿ ತಪವಿರುವಂತೆ ತೋರುತ್ತಿತ್ತು" ಎಂಬ ಸಾಲುಗಳು ಆ ಪ್ರಕೃತಿಯೇ ನಾಳೆಗಾಗಿ ಕಾಯುವಾಗ ನಾವು ಕಾಯುವುದು ಸಹಜ ಕ್ರಿಯೆ ಎಂಬ ಭಾವವನ್ನು ಮೂಡಿಸುತ್ತವೆ.

ಅವರ ಮೊದಲ ಕವನ ಸಂಕಲನ 'ರಾಗಿಣಿ'ಯಲ್ಲಿ ನವೋದಯದ ಕನಸುಗಾರಿಕೆಯೊಂದಿಗೆ ಗಂಡು ಹೆಣ್ಣಿನ ಒಲವು, ಸಾತ್ವಿಕ ದಾಂಪತ್ಯ, ಬದುಕಿನ ನೋವು ನಲಿವುಗಳೆಲ್ಲವೂ ಕೋಮಲವಾದ ಅಭಿವ್ಯಕ್ತಿಯನ್ನು ಪಡೆದುಕೊಂಡಿವೆ.

ಅವರ ವಚನಗಳಲ್ಲಿ ಹಾಸ್ಯ, ವಿಷಾದ, ಗಾಂಭೀರ್ಯ, ಆತ್ಮಾವಲೋಕನ, ಜೀವನ ಜಿಜ್ಞಾಸೆ ಎಲ್ಲವೂ ಮಡುಗಟ್ಟಿವೆ. ಕೆಲವೊಮ್ಮೆ ಈ ವಚನಗಳು ದೀರ್ಘವಾದಾಗ ವಾಚ್ಯವು ಆಗುತ್ತವೆ. ಅವರ "ಜ್ಯೋತಿಗೆ ಬೆನ್ನಾಗಿ ಕೂತುಕೊಂಡರೆ ನೀನು; ಜ್ಯೋತಿಯ ಬೆಳಕು ಸುತ್ತಲು ಇದ್ದರು ಜ್ಯೋತಿ ಕಾಣುವುದೆ ಸರಸಿಯೆ" ಎಂಬ 'ಸುರಗಿಯ ಸುರಹೊನ್ನೆ'ಯ ತ್ರಿಪದಿಯಲ್ಲಾಗಲೀ, "ಕರೆವಾಗ ಹಿತವಾಗಿ ಕೆರೆದ ಮೇಲುರಿಯುವ ತುರಿಯ ಹಾಗಿಹುದು ಜಗವಿದು" ಎಂಬ 'ತುಂಬೆ ಹೂವಿ'ನ ಏಳೆಯಲ್ಲಾಗಲೀ, ಲೋಕಾನುಭವದ ಮಾತುಗಳು, ಲೋಕ ಜೀವನದ ಸಂಕೀರ್ಣತೆಗೆ ಕನ್ನಡಿ ಹಿಡಿಯುತ್ತವೆ.

ಹೀಗೆ ಅವರ ಯಾವುದೇ ಕಾವ್ಯಗಳಾದರೂ ಜೀವನವನ್ನು ಬೆಳಗುವ ಆಶಯವನ್ನು ಒಂದಲ್ಲ ಒಂದು ರೀತಿಯಲ್ಲಿ ನಮ್ಮಲ್ಲಿ ಮೂಡಿಸುತ್ತವೆ, ಹಾಗೂ ಕರಾಳ ರಾತ್ರಿಯಲ್ಲಿ ಇಣುಕುವ ದಿವ್ಯಪ್ರಭೆಯಂತೆ, ಮಿನುಗುವ ನಕ್ಷತ್ರದಂತೆ, ಮಿನುಮಿನುಗುವ ಮಿಂಚುಹುಳದಂತೆ ನಮ್ಮ ಮನದಲ್ಲಿ ಜೀವನದ ಅರ್ಥವನ್ನು ಹೊಳಯಿಸುವುದರಲ್ಲಿ ಯಾವುದೇ ಸಂಶಯವಿಲ್ಲ.

"ಮಂಗಳವಾಗಲಿ ಈ ಚಂದ್ರವೀಥಿಗೆ
ಮಂಗಳವಾಗಲಿ ಕವಿಗೆ
ಮಂಗಳವಾಗಲಿ ಈ ಪ್ರೇಮಬೋಧಿಗೆ
ಮಂಗಳವಾಗಲಿ ಬುವಿಗೆ".

**ಆಧಾರ ಗ್ರಂಥಗಳು**


1. ಐತಾಳ ಚಂದ್ರಶೇಖರ, ಜಿ. (೧೯೭೨). ಪೂರ್ಣಕುಂಭ. ಮಂಗಳೂರು: ಶಾರದಾ ಪ್ರೆಸ್.
2. ಎಸ್ ವಿ ಪಿ ಅವರ ಕೃತಿಗಳು